# GULBARGA UNIVERSITY

"Jnana Ganga", GULBARGA - 585 106, Karnataka, India.

☎ 08472-263202
Fax. 08472-263206
E-Mail: root @guluni.kar.nic.in
website: www.gulbargauniversity.ac.in

ಸಂ.ಗುವಿಗು/ವಿಮವಿ/ಬಿಓಎಸ್/2014–15/ 8174

ದಿನಾಂಕ: 16/3/2015

**ಸುತ್ತೋಲೆ**

ವಿಷಯ: ವಿವಿಧ ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶ ನೀಡಲು ಅರ್ಹತೆ (10+2) ನಿಗದಿಪಡಿಸುವ ಬಗ್ಗೆ.

ಉಲ್ಲೇಖ: 1) ಶೇಖ ಮಹಿಬೂಬ ಎಜುಕೇಶನಲ್ ಸೊಸಾಯಿಟಿ ಇವರ ಪತ್ರ ದಿನಾಂಕ: 17.12.2014.
2) ಕುಲಪತಿಗಳ ಅನುಮೋದನೆ ದಿನಾಂಕ: 31.01.2015. & 7.3.2015

****

ಮೇಲ್ಕಾಣಿಸಿರುವ ವಿಷಯಕ್ಕೆ ಸಂಬಂಧಿಸಿರುವಂತೆ, ಎಲ್ಲಾ ಸಂಲಗ್ನತೆ ಹೊಂದಿರುವ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ, ಎಲ್ಲಾ ಮಹಾವಿದ್ಯಾಲಯಗಳಲ್ಲಿ ವಿವಿಧ ಪದವಿಗಳಿಗೆ ಪ್ರವೇಶಾತಿಗಾಗಿ ಹಲವಾರು ದೂರ ಶಿಕ್ಷಣ ಸಂಸ್ಥೆಗಳಿಂದ 10+2 ಪಾಸಾಗಿರುವ ವಿದ್ಯಾರ್ಥಿಗಳು ನೇರವಾಗಿ ವಿಶ್ವವಿದ್ಯಾಲಯಕ್ಕೆ ಸಂಪರ್ಕಿಸುತ್ತಿರುವುದು ಕಂಡುಬಂದಿದೆ. ಅಲ್ಲದೇ ಇಂತಹ ದೂರಶಿಕ್ಷಣ ಸಂಸ್ಥೆಯ ನೋಡಲ್ ಕೇಂದ್ರಗಳೂ ಸಹ ತಾವು ನಡೆಸುತ್ತಿರುವ ಕೋರ್ಸುಗಳಿಗೆ ತತ್ಸಮಾನತೆಯನ್ನು ನೀಡುವಂತೆ ಪತ್ರವ್ಯವಹಾರ ಮಾಡುತ್ತಿರುವುದು ಗಮನಿಸಲಾಗಿದೆ.

ಈಗಾಗಲೇ ತಮಗೆ ತಿಳಿದಿರುವಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ 10+2 ಕೋರ್ಸ ಪೂರೈಸಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಉಚ್ಛನ್ಯಾಯಾಲಯದ ಆದೇಶದಂತೆ ರದ್ದುಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರು ವಿವಿಧ ಪದವಿ ಕೋರ್ಸುಗಳ ಪ್ರವೇಶಾತಿ ಸಂದರ್ಭದಲ್ಲಿ ದೂರಶಿಕ್ಷಣ/ಬಾಹ್ಯಶಿಕ್ಷಣ ಇತರೆ ಹೊರರಾಜ್ಯದ ವಿವಿಧ ಶಿಕ್ಷಣ ಸಂಸ್ಥೆಗಳಿಂದ 10+2 ಕೋರ್ಸ ಪೂರೈಸಿರುವ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಮೊದಲು ಅವರು ಪ್ರವೇಶಾತಿಗಾಗಿ ಸಲ್ಲಿಸಿರುವ ಅರ್ಹತಾ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ, ಪ್ರವೇಶಾತಿಗೆ ಮೊದಲು ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ ಅಥವಾ ಅವರು ಪೂರೈಸಿದ 10+2 ಕೋರ್ಸಿನ ಅಂಕಪಟ್ಟಿಯನ್ನು ಪ್ರವೇಶಕ್ಕೆ ಅರ್ಹತೆ ಪಡೆದಿರುವ ಬಗ್ಗೆ ಲಿಖಿತ ಒಪ್ಪಿಗೆ ಪತ್ರ ಪಡೆದ ನಂತರವೇ ಮಹಾವಿದ್ಯಾಲಯದಲ್ಲಿ ವಿವಿಧ ಪದವಿ ಕೋರ್ಸಿಗೆ ಪ್ರವೇಶ ಪಡೆಯತಕ್ಕದ್ದು.

ವಿಶ್ವವಿದ್ಯಾಲಯದಿಂದ ಯಾವುದೇ ವಿದ್ಯಾರ್ಥಿ ಅಥವಾ ನೋಡಲ್ ಕೇಂದ್ರಗಳಿಗೆ ಪ್ರತ್ಯೇಕವಾಗಿ 10+2 ಕೋರ್ಸಿನ ಅರ್ಹತಾ ಪ್ರಮಾಣ ಪತ್ರ ನೀಡುವದಿಲ್ಲ. ಪ್ರವೇಶ ಪಡೆಯಬಯಸುವ ಕಾಲೇಜಿನ ಪ್ರಾಂಶುಪಾಲರು ಸೂಕ್ತವಾಗಿ ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿ ಲಿಖಿತ ಆದೇಶ/ಅನುಮತಿ ಪಡೆದಲ್ಲಿ ಮಾತ್ರ ಪ್ರವೇಶ ನೀಡುವಂತೆ ಈ ಮೂಲಕ ತಿಳಿಸಲಾಗಿದೆ.

16/3/15

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಗೆ,
ಎಲ್ಲಾ ಕಾಲೇಜಿನ ಪ್ರಾಂಶುಪಾಲರಿಗೆ,

ಪ್ರತಿ:
ಡಾ॥ ಡಾರ್ಲಿ ಪಟಥಿಲ್, ಮುಖ್ಯಸ್ಥರು, ಕಂಪ್ಯೂಟರ್ ಸೆಂಟರ್, ಗು.ವಿ.ಗುಲಬರ್ಗಾ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.